# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಸ್ಪೆಷಲ್ ಕೇಸ್ ನಂ. 27/2020**

**ದೋ.ಸಾ. : 10 ಪ್ರಾ.ಸಾ. : 5**

| | | |
|---|---|---|
| ಸಾಕ್ಷಿಯ ಹೆಸರು | : | ರಜಾಕ್ |
| ತಂದೆಯ ಹೆಸರು | : | ಜುಮ್ಮಾ ಸಾಬ್ |
| ವಯಸ್ಸು | : | 32 ವರ್ಷ |
| ಕೆಲಸ | : | ಕೂಲಿ |
| ವಾಸ | : | ಗುಂಜಾವತಿ, ಮುಂಡಗೋಡ |

**ದಿನಾಂಕಃ 26.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಚಾ.ಸಾ.7 ಮಾಬೂಬಿ ನನ್ನ ತಾಯಿ, ಚಾ.ಸಾ.1 ಕಾಸಿಂ ಸಾಬ್ ನನ್ನ ಅಣ್ಣ, ಚಾ.ಸಾ.8 ಮಹಮ್ಮದ್ ಹನೀಫ್ ಮತ್ತು ಚಾ.ಸಾ.9 ಮುಸ್ತಾಕ್ ನನ್ನ ತಮ್ಮಂದಿರು. ನಾವು ಪರಿಶಿಷ್ಟ ಪಂಗಡಗಳ (ಸಿದ್ದಿ [ಉತ್ತರ ಕನ್ನಡ]) ಜಾತಿಗೆ ಸೇರಿದವರು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ, ಅವರು ನಮ್ಮ ಸಂಬಂಧಿಕರು. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಹಾಗೂ ಮದುವೆಯ ಊಟದ ಕುರಿತಂತೆ 1 ಮತ್ತು 3 ನೇ ಆರೋಪಿತರು ಚಾ.ಸಾ.9 ರವರ ಜೊತೆಗೆ ಜಗಳ ಮಾಡಿರುವುದಿಲ್ಲ. 1 ನೇ ಆರೋಪಿತನು ಚಾ.ಸಾ.9 ರವರ ಕೆನ್ನೆಯ ಮೇಲೆ ಹೊಡೆದಿರುವುದಿಲ್ಲ ಹಾಗೂ 2 ಮತ್ತು 3 ನೇ ಆರೋಪಿತರು ನನ್ನ ತಮ್ಮ ಚಾ.ಸಾ.8 ರವರಿಗೆ ಕೈಯಿಂದ ಹೊಡೆದಿರುವುದಿಲ್ಲ ಹಾಗೂ 2 ಮತ್ತು 3 ನೇ ಆರೋಪಿತರು ನನ್ನ ತಾಯಿ ಚಾ.ಸಾ.7 ರವರಿಗೆ ಹೊಡೆದಿರುವುದಿಲ್ಲ ಮತ್ತು ಆಕೆಯ ಮಾನಕ್ಕೆ ಕುಂದುಂಟುಪಡಿಸಿಲ್ಲ. ನನ್ನ ತಾಯಿ ಚಾ.ಸಾ.7 ಹಾಗೂ ನನ್ನ ಸಹೋದರ ಚಾ.ಸಾ.8 ಬೈಕಿನ ಮೇಲೆ ಹೋದಾಗ ಬಿದ್ದು ಪೆಟ್ಟು ಮಾಡಿಕೊಂಡಿದ್ದು, ಅವರನ್ನು ಚಿಕಿತ್ಸೆಗಾಗಿ ಮುಂಡಗೋಡದ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ, ಅಲ್ಲಿ ಪೊಲೀಸರು ಬಂದಿರುತ್ತಾರೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಅಥವಾ ಮರು ಹೇಳಿಕೆ ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ-**

2. ದಿನಾಂಕ 14.04.2019 ರಂದು ನನ್ನ ಚಿಕ್ಕಮ್ಮನ ಮಗಳ ಮದುವೆಗೆ ನಾನು ಹಾಗೂ ನನ್ನ ಅಣ್ಣ ಚಾ.ಸಾ.1, ತಮ್ಮಂದಿರಾದ ಚಾ.ಸಾ.8 ಮತ್ತು 9 ರವರು ಹೋಗಿದ್ದೆವು ಎಂದರೆ ಸರಿಯಲ್ಲ. ಅಲ್ಲಿ ಊಟದ ಸಮಯದಲ್ಲಿ 1 ಮತ್ತು 3 ನೇ ಆರೋಪಿತರು ಹಾಗೂ ಚಾ.ಸಾ.9 ರವರ ನಡುವೆ ಊಟದ ಪ್ಲೇಟಿನ ವಿಚಾರದಲ್ಲಿ ಜಗಳ ಆಗಿತ್ತು ಎಂದರೆ ಸರಿಯಲ್ಲ. ದಿನಾಂಕ 15.04.2019 ರಂದು ರಾತ್ರಿ ಚಾ.ಸಾ.9 ರವರು ನನ್ನ ಚಿಕ್ಕಮ್ಮ ಫಾತಿಮಾ ರವರ ಮನೆಗೆ ಹೋದಾಗ, ಅಲ್ಲಿ 1 ನೇ ಆರೋಪಿತನು ಚಾ.ಸಾ.4 ಶಬ್ಬೀರ್ ಇವರೊಂದಿಗೆ ಮಾತನಾಡುತ್ತಿದ್ದಾಗ ಚಾ.ಸಾ.9 ರವರನ್ನು ನೋಡಿ ಆತನಿಗೆ "ರಾಂಡಕೇ ಬೇಟೆ " ಎಂದು ಬೈದು ಆತನ ಕೆನ್ನೆಯ ಮೇಲೆ ಹೊಡೆದ ಎಂದರೆ ಸರಿಯಲ್ಲ ಆಗ ನಾನು, ಚಾ.ಸಾ.1 ಹಾಗೂ ನನ್ನ ತಾಯಿ ಚಾ.ಸಾ.7 ಸೇರಿ ಜಗಳದ ಬಗ್ಗೆ 1 ನೇ ಆರೋಪಿತನಿಗೆ ಕೇಳುತ್ತಿದ್ದಾಗ, ಅಲ್ಲಿಯೇ ಇದ್ದ 2 ಮತ್ತು 3 ನೇ ಆರೋಪಿತರು ನಮಗೆ ದೂಡಾಡಿದರು ಎಂದರೆ ಸರಿಯಲ್ಲ ಹಾಗೂ 1 ನೇ ಆರೋಪಿಯು ಚಾ.ಸಾ.8 ರವರ ಮೂಗಿಗೆ ಮುಷ್ಟಿಯಿಂದ ಹೊಡೆದನು ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರು ಸೇರಿ ನನ್ನ ತಾಯಿ ಚಾ.ಸಾ.7 ರವರಿಗೆ ದೂಡಾಡಿ, ಆಕೆಯ ಕೈ ತಿರುಗಿಸಿ ಹೊಡೆದು, ಆಕೆಯ ಮಾನಕ್ಕೆ ಕುಂದುಂಟಾಗುವಂತೆ ಮಾಡಿದರು ಎಂದರೆ ಸರಿಯಲ್ಲ. ಜಗಳ ಬಿಡಿಸಲು ಹೋದ ಚಾ.ಸಾ.1 ರವರಿಗೆ 1 ರಿಂದ 3 ನೇ ಆರೋಪಿತರು ಸೇರಿ ಕೈಯಿಂದ ಹೊಡೆದು ಅವನು ಧರಿಸಿದ ಅಂಗಿಯನ್ನು ಹರಿದರು ಎಂದರೆ ಸರಿಯಲ್ಲ. ಪೆಟ್ಟು ತಿಂದ ಚಾ.ಸಾ.8 ಹಾಗೂ ನನ್ನ ತಾಯಿಗೆ ಉಪಚಾರದ ಕುರಿತು ಮುಂಡಗೋಡದ ಸರಕಾರಿ ಆಸ್ಪತ್ರೆಗೆ ನಾನು 108 ವಾಹನದಲ್ಲಿ ಕರೆದುಕೊಂಡು ಹೋಗಿದ್ದೆನು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವತಃ ಚಾ.ಸಾ.8 ಹಾಗೂ ನನ್ನ ತಾಯಿ ಮೋಟಾರ್ ಬೈಕ್ ಮೇಲೆ ಹೋಗುತ್ತಿದ್ದಾಗ ಬಿದ್ದು ಪೆಟ್ಟು ಮಾಡಿಕೊಂಡು ಆಸ್ಪತ್ರೆಗೆ ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಘಟನೆ ಕುರಿತಂತೆ ದಿನಾಂಕ 17.04.2019 ರಂದು ಹೇಳಿಕೆಯನ್ನು ಹಾಗೂ ದಿನಾಂಕ 10.07.2019 ರಂದು ಮರು

ಹೇಳಿಕೆಯನ್ನು ಈ ಮೇಲೆ ಓದಿ ಹೇಳಿದಂತೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನಿ.ಪಿ.12 ಮತ್ತು 13 ಎಂದು ಗುರುತಿಸಲಾಯಿತು.

3. ಈ ಪ್ರಕರಣದ 1 ನೇ ಆರೋಪಿತನು ಚಾ.ಸಾ.1, 8, 9 ಹಾಗೂ ಒರ್ವ ಮಹಮ್ಮದ್ ತಂದೆ ಕರೀಂ ಸಾಬ್ ಮುಜಾವರ್ ಇವರ ಮೇಲೆ ದೂರು ದಾಖಲಿಸಿದ್ದು, ಅದು ಎಸ್.ಸಿ ನಂಬರ 38/2022 ಆಗಿದ್ದು, ಅದು ಇದೇ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆ ಎಂದರೆ ಸರಿ. ಆ ಪ್ರಕರಣದಲ್ಲಿ ಈ ಪ್ರಕರಣದ 1 ರಿಂದ 3 ನೇ ಆರೋಪಿತರು ನಮ್ಮ ಪರವಾಗಿ ಪ್ರತಿಕೂಲ ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿ. ಆದ ಕಾರಣ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಡಿ.ಡಿ.ಕೆ ವಕೀಲರಿಂದಃ-**

ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ